ಗುಂಡ್ಲು ಪೇಟೆ ಕಬ್ಬಹಳ್ಳಿ, ಬೊಮ್ಮಲಾಪುರದ ಆರೋಗ್ಯ ಕೇಂದ್ರಗಳ ಕುರಿತು

2916 - ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್. (ಗುಂಡ್ಲುಪೇಟೆ) : ಮಾನ್ಯ ಆರೋಗ್ಯ ಮತ್ತು ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆಹೆಚ್ಎಸ್ಡಿಪಿ ಯೋಜನೆ ಅಡಿಯಲ್ಲಿ ಗುಂಡ್ಲುಪೇಟೆ ಮತ್ತು ಕಬ್ಬಹಳ್ಳಿ ಆಸ್ಪತ್ರೆ ಕಟ್ಟಡಗಳ ನಿರ್ಮಾಣ ಕೆಲಸ ಯಾವ ಸಾಲಿನಲ್ಲಿ ಪ್ರಾರಂಭಿಸಲಾಯಿತು?

ಆ) ನಿರ್ಮಾಣ ಕೆಲಸ ಮುಗಿಸಲು ಅವಧಿ ನಿಗದಿಪಡಿಸಲಾಗಿದೆಯೆ?

ಇ) ಗುಂಡ್ಲುಪೇಟೆ ವಿವಿಧ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಮತ್ತು ಸಿಬ್ಬಂದಿ ಹುದ್ದೆಗಳ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿಯೆ?

ಈ) ಬಂದಿದ್ದರೆ ತುಂಬಲು ಕ್ರಮ ಕೈಗೊಳ್ಳಲಾಗಿದೆಯೆ?

ಉ) ಬೊಮ್ಮಲಾಪುರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸ್ವಂತ ಕಟ್ಟಡ ಹೊಂದಲು ಕ್ರಮ ಕೈಗೊಳ್ಳಲಾಗಿದೆಯೆ?

ಡಾ|| ಎ.ಬಿ. ಮಾಲಕ ರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಕರ್ನಾಟಕ ಆರೋಗ್ಯ ವ್ಯವಸ್ಥೆಗಳ ಅಭಿವೃದ್ಧಿ ಯೋಜನೆಯಡಿ ಗುಂಡ್ಲುಪೇಟೆ ಮತ್ತು ಕಬ್ಬಹಳ್ಳಿ ಆಸ್ಪತ್ರೆಗಳ ಕಾಮಗಾರಿಯನ್ನು ಕ್ರಮವಾಗಿ ಮಾರ್ಚ್ 99 ಮತ್ತು ಸಪ್ಟೆಂಬರ್ 1998 ರಲ್ಲಿ ಪ್ರಾರಂಭಿಸಲಾಗಿದೆ.

ಆ) ಹೌದು. ಈ ಎರಡು ಆಸ್ಪತ್ರೆಗಳ ಕಾಮಗಾರಿಯನ್ನು ಮುಗಿಸಲು ನಿಗದಿಪಡಿಸಿರುವ ಅವಧಿಯು ಗುತ್ತಿಗೆ ಕರಾರು ದಿನಾಂಕದಿಂದ 18 ತಿಂಗಳುಗಳಾಗಿರುತ್ತದೆ.

ಇ) ಹೌದು.

ಈ) ಗ್ರಾಮೀಣ ಪ್ರದೇಶಗಳಲ್ಲಿ ಖಾಲಿ ಇರುವ ವೈದ್ಯರು ವಿವಿಧ ಸಿಬ್ಬಂದಿಯ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ತುಂಬಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ.

ಉ) ಅಯವ್ಯಯ ಅವಕಾಶ ಕಲ್ಪಿಸಲಾಗಿದೆ ಮತ್ತು ಕೆಲಸ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗಿದೆ.

ಭೂಸೇನಾ ನಿಗಮಕ್ಕೆ ನೀಡಿರುವ ಯೋಜನೆಗಳು

2918 - ಶ್ರೀ ನೀಲಕಂಠಪ್ಪ ಬಿ.ಆರ್. (ತರೀಕೆರೆ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ರದುರ್ಗ ಜಿಲ್ಲಾ ಭೂ ಸೇನಾ ನಿಗಮದ ಮತಿಯಿಂದ 1998-99, 1999-2000 ಮತ್ತು 2000-2001 ರವರೆಗೆ ಎಷ್ಟು ಯೋಜನೆಗಳನ್ನು ನೀಡಲಾಗಿದೆ? ಅವು ಯಾವುವು? ವಿವರ ನೀಡುವುದು?